(*b*) The strength of students was not sufficient to form a New Centre at Anjuman Junior College, Bijapur for S.S.L.C. Examination of April 1981.

(*c*) Permission is now given.

SRI S. H S. BAKSHI ---The Hon'ble Minister has given a reply that the strength of students was not sufficient to form a new Centre at Anjuman Junior College, Bijapur, for SSLC examination of April 1981. The list containing the number of students that are appearing for the examination was sent during 1981 itself. Even then, I would like to know the reasons for not sanctioning the New Centre?

SMT. NAGAMMA C. KESHAVA MURTHY.—During the year 1981–82, we could not sanction the Centre because we did not have enough strength during that year but during 1982-83, again a representation was given by the Hon'ble Member and again we got the report and found that there is enough strength. So, we have already sanctioned one Centre for that institution.

SRI S.H.S. BAKSHI.—Why did the Centre is not sanctioned during 1981?

SMT. NAGAMMA C. KESHAVAMURTHY.—Academic year 1981–82 is already over. Now we are in 1982–83. For this year, we have sanctioned.

Disteillries Working in the State

455 SRI BHEEMANNA KHANDRE (Bhalki) Will the Chief Minister be pleased to state:—

(*a*) the number of Distilleries working in the State and their capacity, District-wise and Distillery-wise

(*b*) production of the molasses in the whole State, Factory wise and Khandasari Units wise per year from 1977 to 1980;

(*c*) the quantity of molasses allotted from Bidar District to the Distillery in the State with particulars and individual names since last three years;

(*d*) the quantity of molasses allotted to the Distilleries in the State from M/s. Bidar SSK. Bidar and 12 Khandasari Units since last three years 1977 to 1980;

(*e*) total tonne of Sugar-cane crushed by M/s Bidar SSK, Bidar and 12 Khandasari as mentioned each year from 1977 to 1980 and Molasses produced by those units separately?

SRI R. GUNDU RAO (Chief Minister).—

(*a*) There are 10 Distilleries at present in the State and they are manufacturing Rectified Spirit. Details in Annexure–I is laid on the table.

(*b*) The Statements showing the production of molasses in Suga Factories and Khandasari Units for the years 1977 to 1980 in Annexure– II & II(A) is laid on the table.

(*c*) The Statements showing the details of allotment of molasses made to the several Distilleries in the State from Bidar District for the last three years in Annexure III & IV is laid on the table.

(*d*) Same as item No. (c).

*(*e*) Statement showing the Sugar-cane crushed and molasses produced yearwise by Bidar SSK. Bidar and 12 Khandasari units in Annexure V & V(A) is laid on the table.

SREE S. BHEEMANNA KHANDRE.—Actual moiasses used in the State ಎಷ್ಟು ಸ್ವಾಮಿ ?

ಶ್ರೀ ಧರ್ಮಸಿಂಗ್.—(ಮುಖ್ಯಮಂತ್ರಿಗಳ ಪರವಾಗಿ) ೨೬೫,೦೦೦ ಟನ್‌ಗಳು.

SRI S. BHEEMANNA KHANDRE.—What is the rat on of rectified spirit and molasses ? ೧ ಟನ್ ಮೊಲಾಸಸ್‌ಗೆ ಎಷ್ಟು ರೆಕ್ಟಿಫೈಡ್ ಸ್ಪಿರಿಟ್ ಸಿಗುತ್ತದೆ ?

ಶ್ರೀ ಧರ್ಮಸಿಂಗ್.—ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ನಮ್ಮಲ್ಲಿ ೧೨ ಖಂಡಸಾರಿಗಳು ಇವೆ. ಅದರಲ್ಲಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ವರ್ಷಕ್ಕೆ ೨ ಲಕ್ಷ ಟನ್ ಕಬ್ಬನ್ನು ಅರಿಯುತ್ತಿದೆ. ಹಾಗೂ ೧೨ ಖಂಡಸಾರಿ ಕಾರ್ಖಾನೆಗಳು ವರ್ಷಕ್ಕೆ ೫ ಲಕ್ಷ ಟನ್ ಅರಿಯುತ್ತಿದೆ. ಈಗ ೯೦ ದಿವಸಕ್ಕೆ ಪರ್ಮಿಷನ್ ಇದ್ದು ೫ ಲಕ್ಷ ಟನ್‌ಕಬ್ಬನ್ನು ಕಾರ್ಖಾನೆಗಳವರು ಅರಿಯುತ್ತಿದ್ದಾರೆ. ಒಂದೊಂದು ಖಂಡಸಾರಿಯ ಕೆಪಾಸಿಟಿ ೧೦೦ ರಿಂದ ೪೦೦ ಟನ್ ಡೇಲಿ ಇದೆ. ತಾವು ವರದಿ ಕೊಟ್ಟಿದ್ದೀರಿ. ತಾವು ಕೊಟ್ಟಿರುವ ಅನೆಕ್ಷರ್ ೪ರಲ್ಲಿ ನಂ. ೧ರಲ್ಲಿ ಈ ರೀತಿ ಇದೆ. ಮೈಸೂರು ಖಂಡಸಾರಿಗೆ ತಾವು ಕ್ರಷಿಂಗ್‌ಗೆ ಪರ್ಮಿಷನ್ ಕೊಟ್ಟಿರುವುದು ೭೯-೮೧ ಕ್ಕೆ ೬,೦೦೦ ಟನ್ only, But it should be ೨೮,೦೦೦. in 1978-79-5251 tonnes sugar cane was crushed in 1979-80-7206 molases produced ಎಂದು ವಿವರಗಳನ್ನು ಕೊಟ್ಟಿದ್ದೀರಿ. ಅನೆಕ್ಷರ್ ೫ ಎನಲ್ಲಿ ೧೫೦ ಟನ್ ಮೊಲ್ಯಾಸಸ್ ಎಂದು ಹೇಳಿದ್ದೀರಿ. ೧೯೭೮-೭೯ ಹಾಗೂ ೧೯೭೯-೮೦ರಲ್ಲಿ ಏನೂ ಇಲ್ಲ. ತಾವು ಯಾವ ಪ್ರಕಾರ ಅಪ್ಪಣೆ ಕೊಟ್ಟಿದ್ದೀರಿ ? ಮಹಾರುತಿ ಖಂಡಸಾರಿಗೆ ೧೯೭೯-೮೦ರಲ್ಲಿ ೭,೨೬೫ ಟನ್ ೧೯೭೮-೭೯ ಕ್ಕೆ ೧೧,೧೭೩ ಟನ್ ಮತ್ತು ೧೯೭೯-೮೦ ಕ್ಕೆ ೨೮,೫೬೨ ಟನ್ ಎಂದು ಕೊಟ್ಟಿದ್ದೀರಿ. ಆದರೆ ಎಷ್ಟು ಮೊಲ್ಯಾಸಸ್ ಬಂದಿದೆ ? ಹೆಚ್ಚು ಮೊಲ್ಯಾಸಸ್ ಬರಬೇಕಾಗಿತ್ತು. ಆ ಮೊಲ್ಯಾಸಸ್ ಎಲ್ಲಾ ಎಲ್ಲಿಗೆ ಹೋಯಿತು ?

ಶ್ರೀ ಧರ್ಮಸಿಂಗ್.—ಸರ್ಕಾರಕ್ಕೆ ವರದಿ ಬಂದಿರುವ ಪ್ರಕಾರ, ಶುಗರ್ ಫ್ಯಾಕ್ಟರಿಯಿಂದ ೫ ಸಾವಿರ ಟನ್ ಮೊಲ್ಯಾಸಿಸ್ ಸಿಗುತ್ತಿದೆ. ಹಾಗೂ ಖಂಡಸಾರಿ ಫ್ಯಾಕ್ಟರಿಯಿಂದ ೫೦೦ ಟನ್ ಮೊಲ್ಯಾಸಸ್ ಸಿಗುತ್ತಿದೆ. ಒಟ್ಟು ನಾವು ೫,೫೦೦ ಟನ್ ಮೊಲ್ಯಾಸಸ್ ಪಡೆಯುತ್ತೇವೆ. ಇದರಲ್ಲಿ ಕೂಡಾ ಫ್ಲಕ್ಚುಯೇಷನ್ಸ್ ಆಗುತ್ತದೆ. ಕಬ್ಬನ್ನು ಎಷ್ಟು ಅರೆಯುತ್ತೇವೆ ಅದರ ಮೇಲೆ ಇದು ಡಿಪೆಂಡ್ ಆಗುತ್ತದೆ. ಆ ಪ್ರಕಾರ ನಾವು ಅಂಕಿಅಂಶಗಳನ್ನು ಒದಗಿಸಿದ್ದೇವೆ. ಇನ್ನೂ ಹೆಚ್ಚಿಗೆ ಕ್ರಶ್ ಆಗುತ್ತಿದೆ.

ಮೆಲ್ಯಾಸಸ್ ಹೆಚ್ಚು ಬರುತ್ತಿಲ್ಲ ಎಂಬ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ತನಿಖೆ ಮಾಡಬೇಕು. ಈ ರೀತಿ ಏಕೆ ಆಗುತ್ತದೆ ಎನ್ನುವುದರ ಬಗ್ಗೆ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಬೇಕು.

ಶ್ರೀ ಎಸ್, ಭೀಮಣ್ಣ ಖಂಡ್ರೆ.—ಅನೆಕ್ಷರ್ ೪ ರ ಪ್ರಕಾರ ಈಗ ಏನು ೨೮೦೦೦ ಟನ್ ಕ್ರಶ ಆದಾಗ ೫ ಸಾವಿರ ಟನ್ ಆಗಲೇಬೇಕೆಂದು ಇದೆ. ಅದು ಒಂದು ರೆಷಿಯೋ ಇದೆ ಖಂಡಸಾರಿಯ ಈ ಮೊಲ್ಯಾಸಸ್ ೧,೫೦೦ ರೂಪಾಯಿಗಳ ಬೆಲೆಯಾಗುತ್ತಿದೆ. ಒಂದೊಂದು ಫ್ಯಾಕ್ಟರೀದೂ ೫,೦೦೦ ಟನ್‌ಗಳಾದರೆ ಇದಕ್ಕೆ ೭೫ ಲಕ್ಷ ರೂಪಾಯಿ ಬೆಲೆ ಆಗುತ್ತದೆ. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಲಾಸ್ ಆಗುತ್ತಿದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು.

ಶ್ರೀ ಧರ್ಮಸಿಂಗ್ —ಅಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು ೧೦ ಡಿಸ್ಟಿಲ್ಲೆರಿಸರ್ಸ್ ಇವೆ. ಒಟ್ಟು ನಾವು ಪಡೆದುಕೊಳ್ಳುತ್ತಿರುವುದು ೨,೬೫ ಸಾವಿರ ಟನ್. ಇದರಲ್ಲಿ ೨೫ ಸಾವಿರ ಟನ್ ಪ್ರಾಣಿಗಳ ಖಾದ್ಯ ತಯಾರಿ ಮಾಡುವುದಕ್ಕೆ ಕೊಡುತ್ತಿದ್ದೇವೆ ೬೦ ಸಾವಿರ ಟನ್ ಈಗ ಶಾರ್ಟೇಜ್ ಇದೆ. ಒಟ್ಟು ಏನು ಉತ್ಪಾದನೆಯಾಗುತ್ತಿದೆ ಅದನ್ನು ಎಲ್ಲಾ ಕಡೆ ಹಂಚುತ್ತಿದ್ದೇವೆ. ನಮಗೆ ೬೦ ಸಾವಿರ ಟನ್ ಕಡಿಮೆ ಬರುತ್ತಿರುವುದರಿಂದ ಬೇರೆ ಕಡೆಗೆ ಕಳುಹಿಸುವ ಪ್ರಮೇಯವಿಲ್ಲ. ಹೆಚ್ಚು ಮೊಲ್ಯಾಸಸ್ ಉತ್ಪಾದನೆಯಾಗುತ್ತಿದೆ, ಆದರೂ ಅದು ಲೆಕ್ಕಕ್ಕೆ ಬರುತ್ತಿಲ್ಲವೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ವಿಚಾರಣೆ ಮಾಡೋಣ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ರಾಜ್ಯದ ೩೮ ಖಂಡಸಾರಿಗಳಲ್ಲಿ ೧೨ ಖಂಡಸಾರಿಗಳು? ಬೀಧರ್‌ನಲ್ಲೇ ಇವೆ. ಇವುಗಳಿಂದ ೫೦ ಸಾವಿರ ಟನ್ ಮೊಲ್ಯೆಸಸ್ ಬರಬೇಕು. ಬರೀ ೨,೪೦೦ ಟನ್ ಬರುತ್ತದೆಂದು ತೋರಿಸಿದ್ದೀರಿ. ಮಿಕ್ಕ ೪೫,೦೦೦ ಟನ್ ಮೊಲ್ಯಾಸಸ್ ಎಲ್ಲಿ ಹೊಯಿತು, ಇದೆಲ್ಲಾ ಲೆಕ್ಕಕ್ಕೆ ಬರಬೇಕಲ್ಲಾ? ನೀವು ಕೊಟ್ಟ ಅಲಾಟ್‌ಮೆಂಟಿಗೂ, ಅವರಿಂದ ಬರುತ್ತಿರುವ ಮೊಲ್ಯಾಸಸ್‌ಗೂ ವ್ಯತ್ಯಾಸ ಇದೆ. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಲಾಸ್ ಆಗುತ್ತಿದೆ. ಇದು ತಪ್ಪು ಲೆಕ್ಕ ಇದೆ. ನಿಮ್ಮ ಇಲಾಖಾ ಮುಖ್ಯಸ್ಥರು ಏನು ಕೆಲಸ ಮಾಡುತ್ತಿದ್ದಾರೆ ಇದರ ಬಗ್ಗೆ ಎನ್‌ಕ್ವಯರಿ ಮಾಡಿಸಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೀದರ್ ಫ್ಯಾಕ್ಟರಿ ಅಧ್ಯಕ್ಷರಾಗಿದ್ದರು ಅವರಲ್ಲಿ ಹೆಚ್ಚಿನ ಮಾಹಿತಿ ಇರಬೇಕು. ಈಗ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ಗಮನಕ್ಕೆ ತಂದಿದ್ದಾರೆ ಅದನ್ನು ನಾನು ಖಂಡಿತ ವಿಚಾರ ಮಾಡಿಸಂತ್ತೇನೆ.

SRI S. BHEEMANNA KHANDRE.—Sir, this itself is a clue. Though lakhs and lakhs of tonnes of surarcane are crushed they are not properly accounted for.

SRI DHARAM SINGH.—If there are any specific instances we will get it them examined.

AN HON MEMBER.—Let the Government issue a policy statement stating that they are not going to issue any more licences in future. I want to know whether there are any application pending before the Government for getting sanction to start distilleries?

ಶ್ರೀ ಧರಮ್‌ಸಿಂಗ್.—ಆ ವಿವರಗಳು ಇಲ್ಲ. ಹಾಲಿ ಹತ್ತು ಫ್ಯಾಕ್ಟರಿಗಳು ಇದ್ದು, ೬ ಕೋಟಿ ರೂಪಾಯಿಂಗಳನ್ನು ೪ ವರ್ಷಗಳ ಹಿಂದೆ ಕೊಟ್ಟಿದ್ದೇವೆ. ಇನ್ನು ಪ್ರೊಡಕ್ಷನ್ ಪ್ರಾರಂಭವಾಗಿಲ್ಲ. ಮುಂದೆ ಷುಗರ್‌ಕೇನ್ ಕೊಡುವಾಗ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಈಗ ತಾವು ಹತ್ತಕ್ಕೆ ಕೊಟ್ಟಿದ್ದೀರಿ ಪ್ರೊಡಕ್ಷನ್ ಎಷ್ಟಾಗುತ್ತದೆ ಇದರ ಬಗ್ಗೆ ವಿಚಾರಣೆ ನಡೆಸುತ್ತೀರಾ

ಶ್ರೀ ಧರ್ಮಸಿಂಗ್.—ಷುಗರ್‌ಕೇನ್ ಕ್ರಷ್ ಆದರೆ, ಪ್ರೊಡಕ್ಷನ್ ಎಷ್ಟು ಆಗುತ್ತದೆಂಬುದನ್ನು ವಿಚಾರ ಮಾಡಬಹುದು.

ಅಧ್ಯಕ್ಷರು.—ಪ್ರಶ್ನೆ ೪೭೪ (೬೭೪) ತಡೆಹಿಡಿಯಲಾಗಿದೆ.